# ನಿನ್ನ ಹಾಡು, ಹಸೆ ನಿನ್ನಲ್ಲೇ ಇರಲಿ

ನಾವು ನಚಿಕೇತನ ಕಥೆಯನ್ನು ನೋಡುತ್ತಿದ್ದೇವೆ. ಯಮಧರ್ಮ ಮತ್ತು ನಚಿಕೇತನ ಮುಖಾಮುಖಿಯನ್ನು ಉಪನಿಷತ್ತು ಮನ ಮಿಡಿಯುವಂತೆ ಬಣ್ಣಿಸುತ್ತಿದೆ. ಒಂದೆಡೆ ಸಾವಿನ ಅಧಿದೈವ ಅಂದರೆ ಹುಟ್ಟು-ಸಾವುಗಳ ರಹಸ್ಯವನ್ನು ಬಲ್ಲ ಯಮಧರ್ಮನಿದ್ದಾನೆ. ಇನ್ನೊಂದೆಡೆ ತನ್ನ ಮನೆಯಿಂದಲೇ ಸಾವಿನ ಮನೆಗೆ ತನ್ನ ತಂದೆಯಿಂದಲೇ ಕಳುಹಿಸಲ್ಪಟ್ಟ ಮುಗ್ಧ ನಚಿಕೇತನಿದ್ದಾನೆ. ಯಜ್ಞ ಯಾಗಾದಿ ಕರ್ಮಕಾಂಡ ಪ್ರಧಾನವಾದ ಬದುಕಿನಲ್ಲಿ ನಡೆಯುತ್ತಿರುವ ವಿಪರ್ಯಾಸಗಳನ್ನು ಕಂಡು ಕೆಟ್ಟೆನಿಸಿದ ಮುಗ್ಧತೆ ಇದು. ತಾನು ಕಂಡ ವಿಪರ್ಯಾಸಗಳನ್ನು ಪ್ರಶ್ನಿಸುವ ಎದೆಗಾರಿಕೆ ಇದ್ದ ಮುಗ್ಧತೆ ಇದು. ಇವೆಲ್ಲದರ ಪರಿಣಾಮವಾಗಿ ತಾನು ಸಾವಿನ ಮನೆಗೆ ನಡೆಯಬೇಕಾಗಿ ಬಂದಾಗ ಈ ಪರಿಣಾಮಕ್ಕೆ ಬೇಸರಿಸದೆ, ಇದನ್ನು ಪ್ರಶ್ನಿಸದೆ, ನೇರವಾಗಿ ಯಮಧರ್ಮನತ್ತ ನಡೆದ ಮುಗ್ಧತೆ ಇದು. ಪ್ರಾಯಃ ನಮ್ಮ ಸತ್ಯಾಗ್ರಹ ಪರಿಕಲ್ಪನೆಯ ಮೂಲರೂಪ ಇಲ್ಲಿ ಕಾಣುತ್ತಿದೆ ಎನ್ನಬಹುದು.

ಸಾವಿನಾಚೆಗಿನ ನಿಜ ಏನು ಎನ್ನುವ ನಚಿಕೇತನ ಪ್ರಶ್ನೆ ಯಮನನ್ನೂ ಅಲುಗಾಡಿಸತಕ್ಕ ಪ್ರಶ್ನೆಯಾಗಿದೆ. ಉಪನಿಷತ್ತು ಎಂಬ ಪದಕ್ಕೆ ಹತ್ತಿರ ಕೂತು ಪರಸ್ಪರ ನಡೆಸತಕ್ಕ ಸಂವಾದ ಎಂಬರ್ಥವಿದೆ. ಇದು ಸಂವಾದ ನಡೆಸತಕ್ಕ ಎರಡು ಜೀವಗಳನ್ನೂ ಬೆಳೆಸತಕ್ಕ ಪಾರಸ್ಪರಿಕತೆಯಾಗಿದೆ. ಒಂದು ಜೀವ, ಸತ್ಯನಿಷ್ಠವಾಗಿ, ಸಮೀಪಿಸಿ ತನ್ನ ಮನಸ್ಸನ್ನು ತೆರೆದುಕೊಂಡರೆ ಅದು ಪಕ್ಕದಲ್ಲಿರುವ ಜೀವವನ್ನೂ ಸತ್ಯನಿಷ್ಠವಾಗಿಸುತ್ತದೆ; ಆ ಜೀವದ ಮನಸ್ಸನ್ನೂ ತೆರೆದಂತಾಗುತ್ತದೆ. ಒಂದು ಮೂಲಪ್ರಶ್ನೆ ಆ ಒಂದು ಉತ್ತರಕ್ಕಾಗಿ ಮಾತ್ರ ಹಂಬಲಿಸಿ ಕೇಳಲ್ಪಟ್ಟಾಗ ತನ್ನ ಉತ್ಕಟತೆಯಿಂದಲೇ ಎಲ್ಲೆಡೆ ಕಂಪನಗಳನ್ನು ಹರಡುತ್ತದೆ. ಇದೇ ಜಿಜ್ಞಾಸೆಯ ಮಹತ್ವವಾಗಿದೆ.

ಯಮಧರ್ಮನೂ ಈಗ ತನ್ನ ನಿಜವನ್ನು ತಾನೇ ಶೋಧಿಸಬೇಕಾಗಿದೆ. ಸಾವಿನ ದೈವಕ್ಕೆ ಅದೇನೂ ಚಿಂತೆಯ ಮಾತಲ್ಲ. ಸಾವೆಂದರೆ ವಿದಾಯದ ಬಾಗಿಲು. ಬಹಿರ್ಮುಖ ಜೀವನಕ್ಕೆ ವಿದಾಯದ ಬಾಗಿಲು. ಆ ವಿದಾಯದ ಬಾಗಿಲನ್ನು ತೆರೆಯಲೆಂದು ನಿಂತವನು ತನಗೆ ತಾನೇ ವಿದಾಯವನ್ನು ಕೋರುವುದಕ್ಕೂ ಸಿದ್ಧನೇ. ಅಂದರೆ ತಾನೇ ಅಂತರ್ಮುಖನಾಗುವುದಕ್ಕೂ ಸಿದ್ಧನೇ. ಆದರೆ, ಬಾಗಿಲೆಂದ ಮೇಲೆ ಆ ಬಾಗಿಲ ಮೂಲಕ ಪ್ರಜ್ಞಾಪೂರ್ವಕವಾಗಿ ಹಾದು ಹೋಗುವ ಮುನ್ನ ಈ ಬದುಕಿನ ಆಸೆಗಳೆಲ್ಲ ಪೂರ್ತಿಯಾಗಿವೆಯೆ, ಮತ್ತೆ ಬದುಕಿಗೆ ಮರಳಬೇಕೆನ್ನುವ ಇಚ್ಛೆಯೇ ಹುಟ್ಟಿಕೊಳ್ಳದಂತೆ ಪ್ರಜ್ಞೆಯು ಮುಕ್ತವಾಗಿದೆಯೆ ಎಂದು ಶೋಧಿಸಬೇಕಿದೆ. ಬಾಗಿಲಲ್ಲಿ ನಿಂತವನು ಶೋಧಕನಾಗದೆ ಇರುವಂತಿಲ್ಲ.

ಯಮನು ಹೇಳಿದನಂತೆ: ಹುಡುಗಾ, ಬದುಕು, ನಿನ್ನಲ್ಲಿ ಇನ್ನೂ ಪೂರ್ತಿಯಾಗಿ ಅರಳಿಕೊಂಡಿಲ್ಲ. ಯಾವುದೋ ಒಂದು ಉತ್ಸಾಹದಿಂದ ಬೌದ್ಧಿಕವಾದ ಕುತೂಹಲದಿಂದ ಈ ಪ್ರಶ್ನೆಗಳನ್ನು ಕೇಳುತ್ತಿರುವೆ ಎನಿಸುತ್ತದೆ. ಬದುಕಿನ ಪೂರ್ಣಾನುಭವವನ್ನು ಬರಿಯ ಊಹಿಸಲಾಗುವುದಿಲ್ಲ. ಅದನ್ನು ಅನುಭವಿಸಿಯೇ ತಿಳಿಯಬೇಕು. ಸಾವಿನಾಚೆಗೇನಿದೆ ಎನ್ನುವ ಈ ಮಾತು ಬಿಡು. ಸಾವಿನೀಚೆಗೆ ಇರುವ ಸಂಭ್ರಮವನ್ನು ನೋಡು. ಬದುಕಿನ ಸುಖ-ಸಂಭ್ರಮದ ಚಿತ್ರ ಹೇಗಿರುತ್ತದೆ ಗೊತ್ತೆ?

ನಿನ್ನದಾಗಿರುವ ವಿಶಾಲವಾದ ಭೂಪ್ರದೇಶ- ಭೂಮೇರ್ಮಹದಾಯತನಂ ಮಡದಿ; ಮಕ್ಕಳು; ಮೊಮ್ಮಕ್ಕಳು ತುಂಬಿಕೊಂಡು ಕಲಕಲ ಎನ್ನುತ್ತಿರುವ ಮನೆ, ಹಾಲ್ಗರೆವ ಹಸುಗಳಿಂದ ತುಂಬಿರುವ ಹಟ್ಟಿ, ಕುದುರೆ, ಆನೆಗಳನ್ನು ಕಟ್ಟಿರುವ ಪಯಣದ ಬಂಡಿಗಳು, ಚಿನ್ನ- ಬೆಳ್ಳಿಗಳ ತುಂಬು ಸಂಪತ್ತು.. ಹಾ! ಹೌದು. ಇವೆಲ್ಲವನ್ನೂ ಅನುಭವಿಸಲು ತುಂಬು ಆಯುಷ್ಯಬೇಕು. ಮತ್ತು ನಿರೋಗ ದೃಢಕಾಯಬೇಕು. ಇವೆಲ್ಲವನ್ನೂ ನೀನು ತುಂಬುಮನಸ್ಸಿನಿಂದ ಯಾವುದೇ ದ್ವಂದ್ವವಿಲ್ಲದೆ ಅನುಭವಿಸಬೇಕು. ಹಾಗೆ ಅನುಭವಿಸಲಾಗುವಂತೆ ನಾನು ನಿನ್ನನ್ನು ಅನುಗ್ರಹಿಸುವೆ. ವರವನ್ನೇ ನೀಡುವೆ. ಸಾವಿನಾಚೆಯ ಮಾತು ಮಾತ್ರ ಬಿಟ್ಟು ಬಿಡು.

ಅಥವಾ ದೊಡ್ಡ ಸಾಮ್ರಾಜ್ಯಕ್ಕೆ ನೀನು ಒಡೆಯನಾಗಬೇಕೇನು? ಹಾಗೇ ಆಗಲಿ. ನೀನು ರಾಜನೇ ಆಗುವೆ. ಅಥವಾ ಈ ಇಹಲೋಕದಲ್ಲಿ ಯಾವುದೆಲ್ಲ ದುರ್ಲಭವಾದ ಕಾಮನೆಗಳಿವೆ; ಅವೆಲ್ಲವನ್ನೂ ನೀನು ಪಡೆಯಬೇಕೇನು?- ನಾನು ಅನುಗ್ರಹಿಸುವೆ.

ಈ ಅಪ್ಸರೆಯರಂಥ ಸ್ತ್ರೀಯರು, ಅವರ ಹಾಡು ಕುಣಿತಗಳು, ಅವರ ಶ್ರೇಷ್ಠವಾದ ಕಲಾವಂತಿಕೆ, ಈ ಧನ ಕನಕ ವಸ್ತು ವಾಹನಗಳು ಇವೆಲ್ಲವುಗಳಿಂದ ನಿನಗೆ ಬೇಕಾದಂತೆ ಸೇವೆ ಮಾಡಿಸಿಕೋ. ಹಿಗ್ಗಿನ ಬುಗ್ಗೆಯೇ ಇಲ್ಲಿದೆ. ಅದು ನಿರಂತರ ಚಿಮ್ಮಲಿ. ನಿನ್ನ ಭಾಗ್ಯ ಈ ಭೂಮಿಯ ಮೇಲೆ ಬೇರೆ ಯಾರಿಗಿದೆ ಎನ್ನುವಂತೆ ಹಿಗ್ಗನ್ನು ಉಂಡು ತೃಪ್ತನಾಗು. ಸಾವಿನ ಆಚೆಗಿನ ಮಾತು ಮಾತ್ರ ಬಿಟ್ಟುಬಿಡು.

ಈ ಎಲ್ಲ ಮಾತುಗಳನ್ನು ನಚಿಕೇತ ಸಾವಿನ ಸಮ್ಮುಖದ ಏಕಾಗ್ರತೆಯಲ್ಲಿ ಕೇಳಿದ. ಸಾವು, ಜೀವವನ್ನು ಸುಳಿದಲ್ಲೇ ಸುಳಿಯುವಂತೆ ಆಮಿಷಗಳನ್ನೊಡ್ಡುತ್ತಿತ್ತು. ಆ ಮೂಲಕ ತನ್ನ ಹಿಡಿತದಲ್ಲೇ ಈ ಜೀವ ಇರಬೇಕೆಂದು ಅದು ಬಯಸುವಂತಿತ್ತು. ನಚಿಕೇತನಿಗೆ ತನ್ನೊಳಗೇ ಇದು ತಿಳಿದು ಬರುತ್ತಿತ್ತು. ಈ ಎಲ್ಲ ಹಿಗ್ಗಿನ ನಡುವೆ ಮನುಷ್ಯ ಪಡೆಯಬಹುದಾದ ತಿಳುವಳಿಕೆಯನ್ನು ನಚಿಕೇತ, ಸಾವಿನೊಂದಿಗೆ ನುಡಿದ.

ಒಳ್ಳೆಯದು. ಈ ಎಲ್ಲ ಭೋಗಗಳೂ ಒಂದಲ್ಲ ಒಂದು ದಿನ ಕೊನೆಗೊಳ್ಳಲೇಬೇಕು. ಆ ಕೊನೆಗೊಂಡ ದಿನವನ್ನೇ ನಾಳೆ ಎಂದಿಟ್ಟುಕೊಳ್ಳೋಣ. ಏಕೆಂದರೆ ಇವೆಲ್ಲ ಒಂದು ದಿನದ ಈ ದಿನದ- ಸಮಾರಂಭ ಅಷ್ಟೆ. ಈ ಸಮಾರಂಭವಾದರೋ ಮೈ-ಮರೆವಿನ ಸಮಾರಂಭ. ಎಚ್ಚರಗೆಡಿಸುವ ಸಮಾರಂಭ. ಇದಕ್ಕೆಲ್ಲ ಕೊನೆ ಇದೆ ಎಂದಾಗ ನಾವು ಬೆಚ್ಚಿಬೀಳಬೇಕೇಕೆ? ಕೊನೆ ಇದೆ ಎಂಬ ನಿಜವನ್ನು ಒಪ್ಪಿಯೇ ಅನುಭವಿಸಬಹುದಲ್ಲವೆ? ಕೊನೆ ಎಂದರೆ ಸಾವು. ಸಾವಿನ ದೇವತೆಯಾದ ನಿನ್ನ ವಶದಲ್ಲಿಯೇ ಈ ಎಲ್ಲ ಭೋಗ ಭಾಗ್ಯಗಳೂ ಇವೆ. ನಿನ್ನ ಮಾತೇ ಈ ಸತ್ಯವನ್ನು ತಿಳಿಸುತ್ತಿದೆ. ಅಂದ ಮೇಲೆ ನೀನು ನನ್ನ ಮುಂದೆ ಒಡ್ಡಿದ ಈ ಭೋಗಚಿತ್ರ ನಿನ್ನಲ್ಲಿಯೇ ಇರಲಿ. ನನಗೆ ಕೇಳಿಸಲೆತ್ನಿಸುವ ಹಾಡು - ಹಸೆ ನಿನ್ನಲ್ಲಿಯೇ ಇರಲಿ. ಸಾವಿನ ಆಚೆಗೆ ಏನು ಎನ್ನುವ ಕಾಡುವ ಪ್ರಶ್ನೆಗೆ ಯಾವ ಹಾಡೂ ಉತ್ತರವಲ್ಲ. ಉತ್ತರವಲ್ಲದೆ ಇನ್ನೇನೂ ನನಗೆ ಬೇಕಿಲ್ಲ!

■ ತೋಷ

## ಮಾತೇ ಮುತ್ತು

★ ನೀವು ರೆಕ್ಕೆಗಳೊಂದಿಗೆ ಜನಿಸಿದ್ದೀರಿ. ಮತ್ತೇಕೆ ನೆಲದಲ್ಲಿ ತೆವಳುತ್ತಿದ್ದೀರಿ?

—ರೂಮಿ

★ ಅತ್ಯಂತ ಹೆಚ್ಚು ಪಡೆದುಕೊಳ್ಳುವವರು ಸಂತೋಷವಾಗಿರುವುದಿಲ್ಲ; ಅತ್ಯಂತ ಹೆಚ್ಚು ಕೊಡುವವರು ಸಂತೋಷವಾಗಿರುತ್ತಾರೆ.

—ಜಾಕ್ಸನ್ ಬ್ರೌನ್ ಜೂ.

★ ಸುಧಾರಣೆ ಆಗಬೇಕೆಂದರೆ ಬದಲಾವಣೆ ಆಗಬೇಕು. ಪರಿಪೂರ್ಣ ಆಗಬೇಕೆಂದರೆ ಆಗಾಗ್ಗೆ ಬದಲಾಗುತ್ತಿರಬೇಕು.

—ವಿನ್‌ಸ್ಟನ್ ಚರ್ಚಿಲ್

★ ನೀವೇ ದಾರಿಯಾಗದೆ, ನೀವು ಯಾವ ದಾರಿಯಲ್ಲೂ ನಡೆಯಲಾರಿರಿ.

—ಗೌತಮ ಬುದ್ಧ

★ ನ್ಯಾಯಬದ್ಧ ಕೆಲಸಗಳನ್ನು ಆರಂಭಿಸಲು ಎಲ್ಲ ಸಮಯವೂ ಒಳ್ಳೆಯ ಸಮಯವೇ.

—ಮಾರ್ಟಿನ್ ಲೂಥರ್ ಕಿಂಗ್ ಜೂ.

ನಿಧಾನವಾಗಿ ನಡೆದರೂ ಪರವಾಗಿಲ್ಲ. ಆದರೆ ಯಾವತ್ತೂ ಹಿಮ್ಮುಖವಾಗಿ ನಡೆಯಬೇಡಿ.

—ಅಬ್ರಹಾಂ ಲಿಂಕನ್

★ ಮೂರ್ಖತನ ಮತ್ತು ಬುದ್ಧಿವಂತಿಕೆಗೆ ಇರುವ ವ್ಯತ್ಯಾಸವಿಷ್ಟೇ- ಬುದ್ಧಿವಂತಿಕೆಗೆ ಮಿತಿ ಇದೆ.

—ಆಲ್ಬರ್ಟ್ ಐನ್‌ಸ್ಟೀನ್

★ ಸತ್ಯ ಮತ್ತು ಸುಳ್ಳನ್ನು ಒಂದು ಕೂದಲು ಬೇರ್ಪಡಿಸುತ್ತದೆ.

—ಉಮರ್ ಖಯ್ಯಾಂ

★ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ; ನೀವು ಜಗತ್ತನ್ನೇ ಬದಲಾಯಿಸಬಹುದು.

—ನಾರ್ಮನ್ ವಿನ್ಸೆಂಟ್ ಪೀಲೆ